# <u>ಕರ್ನಾಟಕ ಲೋಕಾಯುಕ್ತ</u>

ಕಂಪ್ಲೇಟ್/ಉಪಲೋಕ್/ಎಂವೈಎಸ್/2379/2021
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ,
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 11-01-2022.

## <u>ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ</u>

**ವಿಷಯ:** ಶ್ರೀ ಡಿ.ಟಿ.ದಯಾನಂದ, ಕಂದಾಯ ನಿರೀಕ್ಷಕರು, ಪಂಜ ಹೋಬಳಿ, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ, ಮಂಗಳೂರು, - ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

=====

1. ಆರಕ್ಷಕ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ದಕ್ಷಿಣ ಕನ್ನಡ, ಮಂಗಳೂರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸಲ್ಲಿಸಿದ ವರದಿಯಲ್ಲಿ **ಶ್ರೀ ಡಿ.ಟಿ.ದಯಾನಂದ, ಕಂದಾಯ ನಿರೀಕ್ಷಕರು, ಪಂಜ ಹೋಬಳಿ, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ, ಮಂಗಳೂರು,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಹರೀಶ್ ಕುಮಾರ್ ಬಿನ್ ಐತ್ತಪ್ಪ ಮೂಲ್ಯ, ಉದೇರಿ ಮನೆ, ಮುರುಳ್ಯ ಗ್ರಾಮ, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ, ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. <u>ದೂರಿನ</u> <u>ಸಂಕ್ಷಿಪ್ತ</u> <u>ಮಾಹಿತಿ</u> :-

i) ದೂರುದಾರರು ತನ್ನ ದೂರಿನಲ್ಲಿ, ದೂರುದಾರರ ಹೆಂಡತಿ ಸವಿತಾ ಎಂಬುವರ ಹೆಸರಿನಲ್ಲಿರುವ ಸುಳ್ಯ ತಾಲ್ಲೂಕು ಪಂಜ ಹೋಬಳಿಯ ಮುರುಳ್ಯ ಗ್ರಾಮದ ಸರ್ವೇ ನಂ: 70/3ಎ ರಲ್ಲಿ ವಾಸದ ಮನೆಗೆ 94ಸಿ ಅಡಿಯಲ್ಲಿ 9 ಸೆಂಟ್ಸ್ ಜಾಗದ ಮಂಜೂರಾತಿಗಾಗಿ 2017 ರಲ್ಲಿ ಅರ್ಜಿ ಸಲ್ಲಿಸಿದ್ದು, ಈವರೆಗೆ ಹಕ್ಕು ಪತ್ರ ಸಿಗದೇ ಇದ್ದುದರಿಂದ, ಮುರುಳ್ಯ ಗ್ರಾಮದ ಗ್ರಾಮ ಸೇವಕ ಕಿರಣ್ ರವರಲ್ಲಿ ಮಾತನಾಡಿದಾಗ ಅವರು ಅದಕ್ಕೆ ರೂ 15,000/- ಖರ್ಚು ಮಾಡಬೇಕೆಂದು ತಿಳಿಸಿದ್ದು, ಅಷ್ಟು ಹಣ ನನ್ನ ಬಳಿ ಇಲ್ಲದೇ ಇದ್ದುದರಿಂದ, ಎಸಿಬಿ ಪೊಲೀಸ್ ಠಾಣೆಗೆ ದೂರು ಕೊಡಲು ನಿರ್ಧರಿಸಿ, ದಿನಾಂಕ: 09-08-2017 ರಂದು ನನ್ನ ಮೊಬೈಲ್ ನಂ: 9481507419 ನಿಂದ ಮುರುಳ್ಯ ಗ್ರಾಮದ ಗ್ರಾಮ ಸೇವಕ ಕಿರಣ್ ಎಂಬುವರ ಮೊಬೈಲ್ ನಂ: 9482770837 ಕ್ಕೆ ಪೋನ್

ಮಾಡಿದಾಗ ಅವರು ಆರ್.ಐ ಗೆ 8000/- ರೂಪಾಯಿ ನೀಡಬೇಕೆಂದು ತಿಳಿಸಿರುತ್ತಾರೆ. ನಂತರ ನಾನು ದಿನಾಂಕ: 18.08.2017 ರಂದು ಪಂಜನಾಡ ಕಛೇರಿಗೆ ಹೋಗಿ ಆರ್.ಐ ದಯಾನಂದರವರಲ್ಲಿ ಮಾತನಾಡಿದಾಗ ಆರ್.ಐ ದಯಾನಂದರವರು ನನಗೆ ರೂ 8000/-, ವಿ.ಎ ಗೆ 2000/-, ಗ್ರಾಮ ಸಹಾಯಕ ಕಿರಣ್‌ಗೆ 500/-, ಭೂಮಿ ಸೆಕ್ಷನ್‌ಗೆ 500/- ಕೊಡಿ ಎಂದು ಲಂಚ ಕೇಳಿದ್ದು, ಇದನ್ನು ನನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿರುತ್ತಾರೆ. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದಿದರಿಂದ, ದಿನಾಂಕ: 21-08-2017 ದೂರನ್ನು ಆರಕ್ಷಕ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ದಕ್ಷಿಣ ಕನ್ನಡ ಜಿಲ್ಲೆ, ಇವರಿಗೆ ಕೊಟ್ಟಿರುತ್ತಾರೆ. ಈ ಸಂಬಂಧವಾಗಿ ಮೊ.ಸಂಖ್ಯೆ: 10/2017 ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಕಲಂ 7, 8ರ ಅಡಿಯಲ್ಲಿ ಪ್ರಕರಣ ದಾಖಲು ಮಾಡಿರುತ್ತಾರೆ.

ii). ದಿನಾಂಕ: 21-08-2017 ರಂದು ತನಿಖಾಧಿಕಾರಿಯವರು ಪಂಚರಾದ ಶ್ರೀ ತೇಜಕುಮಾರ್ ಎನ್.ಸಿ. ಪಂಚ-1, ಶ್ರೀ ಮಾರುತಿ ಪ್ರಸಾದ್, ಬಿ.ವಿ. ಪಂಚ-2, ಇವರನ್ನು ಬರಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 8500/- ಗಳನ್ನು (ಡಿನಾಮಿನೇಷನ್ 2000 x 4, 500 x 1) ಹಾಜರುಪಡಿಸಿರುತ್ತಾರೆ ಹಾಗೂ ಎದುರುದಾರರು ಲಂಚದ ಬೇಡಿಕೆ ಇಟ್ಟ ಸಂಬಂಧ ವಾಯ್ಸ್ ರೆಕಾರ್ಡ್ ಇದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ನಂತರ ಪಂಚ-2 ಲಂಚದ ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದ್ದು, ಪಂಚ-01 ರವರು ಪ್ರತ್ಯೇಕ ಹಾಳೆಯಲ್ಲಿ ದಾಖಲಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿ ಸೂಚನೆಯ ಮೇರೆಗೆ ಪಂಚ-2 ಶ್ರೀ ಮಾರುತಿ ಪ್ರಸಾದ್, ಬಿ.ವಿ, ರವರು ಪೋಲೀಸ್ ಸಿಬ್ಬಂದಿಯಿಂದ ಫಿನಾಪ್ತಿಲೀನ್ ಪೌಡರ್ ಲೇಪಿಸಿದ ಹಣವನ್ನು ಎಣಿಸಿ, ದೂರುದಾರರ ಧರಿಸಿದ ಶರ್ಟಿನ ಎಡ ಮೇಲ್ಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ದೂರುದಾರರಿಗೆ ನಿಗದಿತ ಸೂಚನೆಯನ್ನು ಕೊಟ್ಟು, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದ ನಂತರ, ದೂರುದಾರರು ತನ್ನ ತಲೆಯನ್ನು ಕೈಯಿಂದ ಸವರುವ ಮೂಲಕ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ಇವರ ಜೊತೆ ನೆರಳು ಸಾಕ್ಷಿಯಾಗಿ ಪಂಚ-1 ತೇಜುಕುಮಾರ್ ಎನ್.ಸಿ. ಇವರು ಇದ್ದು, ಘಟನೆಯನ್ನು ಗಮನಿಸಬೇಕೆಂದು ಸೂಚಿಸಿರುತ್ತಾರೆ ಹಾಗೂ ತನಿಖಾಧಿಕಾರಿಯು ದೂರುದಾರರಿಗೆ ಒಂದು ವಾಯ್ಸ್ ರೆಕಾರ್ಡ್‌ನ್ನು ಕೊಟ್ಟು ಅದನ್ನು ಉಪಯೋಗಿಸುವ ವಿಧಾನವನ್ನು ತಿಳಿಸಿಕೊಟ್ಟಿರುತ್ತಾರೆ. ಈ ಸಂಬಂಧವಾಗಿ ಪಂಚರ ಸಮಕ್ಷಮ ಪ್ರಾಯೋಗಿಕ ಪಂಚನಾಮೆ ದಿನಾಂಕ: 21-08-2017ರಂದು ಬೆಳಿಗ್ಗೆ 11.30 ರಿಂದ ಮ: 1.30 ಗಂಟೆಯವರೆಗೆ ಮಾಡಿರುತ್ತಾರೆ.

iii). ಅದೇ ದಿನ ಅಂದರೆ, ದಿನಾಂಕ: 21-08-2017 ರಂದು ತನಿಖಾಧಿಕಾರಿ, ಸಿಬ್ಬಂದಿ, ದೂರುದಾರರು, ಮತ್ತು ಪಂಚರು ಇವರುಗಳನ್ನು ಕರೆದುಕೊಂಡು ಮ: 3.50 ಕ್ಕೆ ಪುತ್ತೂರಿಗೆ ಬಂದಿರುತ್ತಾರೆ. ನಂತರ ದೂರುದಾರರು ತನ್ನ ಮೊಬೈಲ್ ನಂ: 9481507419 ರಿಂದ ಎದುರುದಾರರ ಮೊಬೈಲ್ ನಂ: 9448549647 ಗೆ ಕರೆ ಮಾಡಿದಾಗ ಎದುರುದಾರರು ತಾನು ಸುಳ್ಯದಲ್ಲಿ ಮೀಟಿಂಗ್

ನಲ್ಲಿ ಇರುವುದಾಗಿ ತಿಳಿಸಿದ್ದು, ಸಂಜೆ 5.00 ಗಂಟೆಯಿಂದ 6.00 ಗಂಟೆ ಒಳಗಡೆ ಸುಳ್ಯಕ್ಕೆ ಬರಲು ತಿಳಿಸಿರುತ್ತಾರೆ. ಕೂಡಲೇ ತನಿಖಾಧಿಕಾರಿ ತಂಡದೊಂದಿಗೆ 4.40 ಕ್ಕೆ ಸುಳ್ಯದ ಸಂತೃಪ್ತಿ ಹೋಟೆಲ್ ಬಳಿ ಬಂದಿರುತ್ತಾರೆ. ನಂತರ ದೂರುದಾರರು ತನ್ನ ಮೊಬೈಲ್ ನಂ: 9481507419 ರಿಂದ ಎದುರುದಾರರ ಮೊಬೈಲ್ ನಂ: 9448549647 ಗೆ ಕರೆ ಮಾಡಿ, ತಾನು ಸಂತೃಪ್ತಿ ಹೋಟೆಲ್ ಬಳಿ ಬಂದಿರುವುದಾಗಿ ತಿಳಿಸಿದಾಗ, ಎದುರುದಾರರು ದೂರುದಾರರಿಗೆ ಅಲ್ಲಿಯೇ ಇರಲು ತಿಳಿಸಿರುತ್ತಾರೆ. ನಂತರ ಸಂಜೆ 4.45 ಕ್ಕೆ ಎದುರುದಾರರು ದೂರುದಾರರ ಮೊಬೈಲ್‌ಗೆ ಕರೆ ಮಾಡಿ, ರಸ್ತೆ ಬದಿಯಲ್ಲಿ ಇರುವ ಬಿಳಿ ಕಾರು ಬಳಿಗೆ ಬರುವಂತೆ ತಿಳಿಸಿದರು. ಕೂಡಲೇ ದೂರುದಾರರು ಎದುರುದಾರರು ಇದ್ದ ರಿಟ್ಜ್ ಕಾರು ನಂ: ಕೆಎ–21–ಎನ್–198 ಬಳಿಗೆ ಬಂದು ಎದುರುದಾರರ ಜೊತೆ ಮಾತನಾಡಿ, ಕಾರಿನ ಒಳಗೆ ಕುಳಿತು ತನ್ನ ಬಳಿ ಇದ್ದ ಪಿನಾಫ್ತಲಿನ್ ಪೌಡರ್ ಲೇಪಿತ ಹಣದ ಪೈಕಿ 8000/– ರೂ.ಗಳನ್ನು ಎದುರುದಾರರಿಗೆ ನೀಡಿದಾಗ, ಅವರು ಬಲಗೈಯಿಂದ ಪಡೆದು ಕಾರಿನ ಬಲಬಾಗಿಲಿನ ನೀರಿನ ಬಾಟಲ್‌ನಲ್ಲಿರುವ ಜಾಗದಲ್ಲಿ ಇಟ್ಟಿರುತ್ತಾರೆ. ಉಳಿದ 500/– ಗ್ರಾಮಸಹಾಯಕ ಕಿರಣ್‌ಗೆ ನೀಡಬೇಕಾಗಿದ್ದು, ಅದನ್ನು ದೂರುದಾರರು ತಮ್ಮ ಬಳಿಯೇ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ಕಾರಿನಿಂದ ಕೆಳಗೆ ಇಳಿದು ತನಿಖಾಧಿಕಾರಿಗೆ ನಿಗದಿತ ಸೂಚನೆಯನ್ನು ಕೊಟ್ಟಿರುತ್ತಾರೆ. ನಂತರ, ತನಿಖಾಧಿಕಾರಿಯವರು ದೂರುದಾರರ ಸೂಚನೆಯನ್ನು ಅನುಸರಿಸಿ, ಸ್ಥಳಕ್ಕೆ ಬಂದಾಗ ದೂರುದಾರರು ಎದುರುದಾರರನ್ನು ತೋರಿಸಿ ಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ಎದುರುದಾರರನ್ನು ಪರಿಚಯಿಸಿಕೊಂಡು ಅವರ ವಿರುದ್ಧ ಪ್ರಕರಣ ದಾಖಲಾಗಿರುವುದರ ಬಗ್ಗೆ ತಿಳಿಸಿರುತ್ತಾರೆ ಹಾಗೂ ತನಿಖೆಗೆ ಸಹಕರಿಸಬೇಕೆಂದು ಸೂಚಿಸಿರುತ್ತಾರೆ. ಈ ವೇಳೆಯಲ್ಲಿ ಸ್ಥಳವು ಮಾಣಿ – ಮೈಸೂರು ರಾಜ್ಯ ಹೆದ್ದಾರಿ 88 ಆಗಿದ್ದು, ರಸ್ತೆಯಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಯ ಮೊಸರು ಕುಡಿಕೆಯ ಮೆರವಣಿಗೆ ಬರುತ್ತಿದ್ದು, ಜನಸಂದಣಿ ಇದ್ದಿದ್ದರಿಂದ, ತನಿಖಾಧಿಕಾರಿಯವರು ಎದುರುದಾರರಿಗೆ ಕಾರಿನ ಚಾಲಕನ ಸೀಟಿನ ಪಕ್ಕದಲ್ಲಿರುವ ಸೀಟಿನಲ್ಲಿ ಕುಳಿತುಕೊಳ್ಳುವಂತೆ ಸೂಚಿಸಿ ತನಿಖಾಧಿಕಾರಿಯವರು ಕಾರನ್ನು ಚಲಾಯಿಸಿಕೊಂಡು ಸುಳ್ಯ ನಿರೀಕ್ಷಣ ಮಂದಿರಕ್ಕೆ ಬಂದಿರುತ್ತಾರೆ. ನಂತರ ಅಲ್ಲಿ ತನಿಖೆಯನ್ನು ಮುಂದುವರೆಸಿ ಎದುರುದಾರರ ಬಲಗೈಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ಅದ್ದಿ ತೊಳೆದಾಗ, ದ್ರಾವಣದ ತಿಳಿಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ, ಎಡಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ಅದ್ದಿ ತೊಳೆದಾಗ, ದ್ರಾವಣದ ಬಣ್ಣ ಬದಲಾವಣೆಯಾಗಿವುದಿಲ್ಲ. ನಂತರ ತನಿಖಾಧಿಕಾರಿಯವರು ಎದುರುದಾರರನ್ನು ಲಂಚದ ಹಣದ ಬಗ್ಗೆ ವಿಚಾರಿಸಿ, ಹಾಜರುಪಡಿಸುವಂತೆ ತಿಳಿಸಿದಾಗ, ಅವರು ಕಾರಿನ ಬಲಬಾಗಿಲಿನ ನೀರಿನ ಬಾಟಲ್‌ನಲ್ಲಿರುವ ಜಾಗದಿಂದ ಹಣವನ್ನು ತೆಗೆದು ಹಾಜರುಪಡಿಸಿರುತ್ತಾರೆ. ಸದರಿ ಹಣವನ್ನು ತನಿಖಾಧಿಯವರ ಸೂಚನೆ ಪಂಚ–1 ರವರು ಪ್ರಾಯೋಗಿಕ ಪಂಚನಾಮೆಯ ವೇಳೆಯಲ್ಲಿ ಬರೆದ ಮೌಲ್ಯ ಮತ್ತು ನಂಬರಿಗೆ ತಾಳೆ ಮಾಡಿಕೊಂಡು ಖಾತ್ರಿಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯವರು ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯವರ ಸೂಚನೆ ಮೇರೆಗೆ ಸಿಬ್ಬಂದಿ

ಲಂಚದ ಹಣವನ್ನು ಇಟ್ಟಿದ ಸ್ಥಳವನ್ನು ಹತ್ತಿಯಿಂದ ಒರೆಸಿ, ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ.

iv). ನಂತರ, ತನಿಖಾಧಿಕಾರಿಯವರು ಎದುರುದಾರರನ್ನು ದೂರುದಾರರಿಂದ ಲಂಚದ ಹಣ ಪಡೆದ ಬಗ್ಗೆ ಸಮಜಾಯಿಷಿಕ್ಕೆಯನ್ನು ಕೇಳಿದಾಗ ಎದುರುದಾರರು ತನ್ನ ಸಮಜಾಯಿಷಿಕೆಯಲ್ಲಿ "ಹರಿಶ್ ಕುಮಾರ್ ಬಿನ್: ಐತ್ತಪ್ಪ ಮೂಲ್ಯ ಉದೇರಿ ಮನೆ, ಮುರುಳ್ಯ ಗ್ರಾಮ ಇವರು ಲಂಚ ಕೇಳಿರುವುದಾಗಿ ಭ್ರಷ್ಟಾಚಾರ ನಿಗ್ರ ದಳಕ್ಕೆ ದೂರು ನೀಡದ ವಿಚಾರ, ದಿನಾಂಕ: 21-08-2017 ರಂದು ಹರೀಶ್ ಕುಮಾರ್ ಬಿನ್ ಐತ್ತಪ್ಪ ಮೂಲ್ಯ ರವರು ನನಗೆ 8,000/- ರೂಪಾಯಿ ಹಣವನ್ನು ನೀಡಿ ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರು ನೀಡಿದ್ದು ಇರುತ್ತದೆ. ಹರೀಶ್ ಕುಮಾರ್ ಬಿನ್ ಐತ್ತಪ್ಪ ಮೂಲ್ಯರವರು ಯಾರು ಎಂಬುದಾಗಿ ನನಗೆ ಪರಿಚಯ ಇರುವುದಿಲ್ಲ. ಇವರು ಈ ದಿನ 3.00 ಗಂಟೆಗೆ ನನಗೆ ದೂರವಾಣಿ ಮೂಲಕ ನಿಮಗೆ 8,000/- ಹಣ ನೀಡಲಿಕ್ಕದೆ ಎಲ್ಲಿ ಬರಬೇಕು ಎಂದು ತಿಳಿಸಿದ್ರು ಅದಕ್ಕೆ ನಾನು ಸುಳ್ಯದಲ್ಲಿ ಇರುವುದಾಗಿ, ನಾಳೆ ಬಂದು ನೀಡುವುದಾಗಿ ತಿಳಿಸಿದ ಮೇರೆಗೆ ಸುಳ್ಯಕ್ಕೆ ಬಂದು ಹಣವನ್ನು ನೀಡಿರುತ್ತಾರೆ. ಸದ್ರಿ ಹರೀಶ್ ಕುಮಾರ್ ಬಿನ್ ಐತ್ತಪ್ಪ ಮೂಲ್ಯ ರವರಿಗೆ ನನ್ನಿಂದ ಯಾವುದೇ ಕೆಲಸವಿರಲಿಲ್ಲ. ಯಾರೋ ಬೇರೆಯವರು ಉದ್ದೇಶಪೂರ್ವಕವಾಗಿ ನನ್ನನ್ನು ಭ್ರಷ್ಟಾಚಾರ ನಿಗ್ರಹ ದಳಕ್ಕೆ ಹಿಡಿದುಕೊಡುವ ನಿಮಿತ್ತ ಈ ಪ್ರಕರಣವನ್ನು ಸೃಷ್ಟಿಸಿರುವುದಾಗಿದೆ. ನಾನು ಹರೀಶ್ ಕುಮಾರ್ ಬಿನ್ ಐತ್ತಪ್ಪ ಮೂಲ್ಯರವರಿಗೆ ಯಾವುದೇ ರೀತಿಯ ತೊಂದರೆ ಮಾಡಿರುವುದಿಲ್ಲ. ಆದರೂ ಕೂಡ ಯಾರದೋ ವ್ಯಕ್ತಿಗಳೊಂದಿಗೆ ಸೇರಿಕೊಂಡು ನನ್ನನ್ನು ಎಸಿಬಿ ಮೂಲಕ ಟ್ರ್ಯಾಪ್ ಮಾಡಿಸಿರುತ್ತಾರೆ. ನಾನು ಈ ಪ್ರಕರಣದಲ್ಲಿ ನಿರ್ದೋಷಿಯಾಗಿದ್ದು, ಸದ್ರಿ ದೂರುದಾರ ಹರೀಶ್ ಕುಮಾರ್ ರವರು ಬೇರೆ ವ್ಯಕ್ತಿಗಳ ಅಥವಾ ನನ್ನ ವಿರೋಧಿಗಳ ಸೂಚನೆಯಂತೆ ನಡೆದುಕೊಂಡಿರುವುದಾಗಿ ಕಂಡು ಬರುತ್ತದೆ. ನಾನು ಯಾವ ವಿಚಾರಕ್ಕೆ ಪ್ರಕರಣ ನಡೆಯಿತು ಎಂಬುದಾಗಿ ಪರಿಶೀಲನೆ ನಡೆಸಿದಾಗ ಸವಿತಾ ಗಂಡ ಹರೀಶ್ ಕುಮಾರ್ ರವರು 94ಸಿ ಕಡತಕ್ಕೆ ಸಂಬಂಧಿಸಿ ಎಂಬುದಾಗಿ ಎಂದು ತಿಳಿದುಬಂತು. ಸದ್ರಿಯವರ 94ಸಿ ಕಡತಕ್ಕೆ ನಾನು ಯಾವುದೇ ರೀತಿಯ ಹಣದ ಬೇಡಿಕೆ ಇಟ್ಟಿರುವುದಿಲ್ಲ. ಆದರೆ ಕೆಲವು ದಿನಗಳ ಹಿಂದೆ ನನ್ನ ಕಚೇರಿಗೆ ಬಂದು ನಿಮಗೆ 94ಸಿ ಕಡತ ಮಾಡಿಕೊಟ್ಟ ಬಾಬ್ತು ಹಣ ಕೊಡಲಿಕ್ಕೆ ಇದೆ ಎಂದು ತಿಳಿಸಿದ್ರು, ಅವರಾಗಿ ಬಂದು ಹಣ ಕೊಡುತ್ತೇನೆ ಎಂಬುದಾಗಿ ತಿಳಿಸಿದಾಗ ನಾನು ನಿರಾಕರಿಸಿರುತ್ತೇನೆ. ಆದರೂ ಸಹ 1-2 ಬಾರಿ ಪೋನ್ ಮಾಡಿ, ಪದೇ ಪದೇ ನಿಮಗೆ ಹಣ ನೀಡಲು ಇದೆ, ಸ್ವೀಕರಿಸಬೇಕಾಗಿ ತಿಳಿಸಿರುತ್ತಾರೆ. ಈ ಸಂದರ್ಭದಲ್ಲಿ ಅವರ ದುರುದ್ದೇಶ ನನಗೆ ತಿಳಿದು ಬಂದಿರಲಿಲ್ಲ. ಈ ದಿನ ಉಪಾಯವಾಗಿ ಭ್ರಷ್ಟಾಚಾರ ನಿಗ್ರಹದ ಪೋಲೀಸರಿಂದ ನನ್ನನ್ನು ದಸ್ತಗಿರಿ ಮಾಡಿಸಿರುತ್ತಾರೆ. ಶ್ರೀ ಹರೀಶ್ ರವರಲ್ಲಿ ನಾನು ಯಾವುದೇ ಲಂಚಕ್ಕೆ ಬೇಡಿಕೆ ಇಡದಿದ್ದರೂ ಸಹ, ಅವರಾಗಿಯೇ ನನಗೆ ಹಣವನ್ನು ಕೊಟ್ಟು ನನ್ನ ತೇಜೋವಧೆ ಮಾಡಿರುತ್ತಾರೆ. ನನ್ನದಲ್ಲದ ತಪ್ಪಿಗೆ ಯಾರದೋ ಆಮಿಷಕ್ಕೆ ಬಲಿಯಾಗಿ ನನ್ನ ವಿರುದ್ಧ ಈ ದೂರು ಸಲ್ಲಿಸಿರುವುದಾಗಿ ನಾನು ಹೇಳುವುದಾಗಿದೆ". ಸದರಿ ಸಮಜಾಯಿಷಿ ಬಗ್ಗೆ ತನಿಖಾಧಿಕಾರಿಯವರು ದೂರುದಾರರನ್ನು ವಿಚಾರಿಸಿದಾಗ ಎದುರುದಾರರು ಸುಳ್ಳು ಸಮಜಾಯಿಷಿ ನೀಡಿರುತ್ತಾರೆಂದು ಹೇಳಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿರುತ್ತಾರೆ. ನಂತರ

ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿರುತ್ತಾರೆ. ನಂತರ ತನಿಖಾಧಿಕಾರಿ ದಿನಾಂಕ: 21-08-2017 ರಂದು ಸಂ: 5.05 ರಿಂದ ರಾ: 9.00 ಗಂಟೆಯವರೆಗೆ ಎದುರುದಾರರ ಜಪ್ತಿ ಪಂಚನಾಮೆಯನ್ನು ಜರುಗಿಸಿರುತ್ತಾರೆ.

v). ತನಿಖಾಧಿಕಾರಿಯವರು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಸಂಬಂಧ ವರದಿಯನ್ನು ಕೋರಿ ವಿಧಿ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಇವರಿಗೆ ಸಲ್ಲಿಸಿರುತ್ತಾರೆ.

vi). ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ನಿಮ್ಮಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಿಲೀನ್ ಅಂಶ ಇರುವುದು ದೃಢಪಟ್ಟಿದೆ.

vii). ಎದುರುದಾರರಿಗೆ ದಿ: 18/09/2021 ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತಮ್ಮ ವಿವರಣೆಯನ್ನು ದಿ: 21/10/2021 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಎದುರುದಾರರು ತನ್ನ ವಿವರಣೆಯಲ್ಲಿ ಪರಿವೀಕ್ಷಣಾ ಟಿಪ್ಪಣಿಯಲ್ಲಿರುವ ಆಪಾದನೆಯ ಅಂಶಗಳನ್ನು ಸಾರಸಗಟಾಗಿ ಅಲ್ಲಗಳೆದಿರುತ್ತಾರೆ. ದೂರಿನ ಅಂಶವನ್ನು ಅಲ್ಲಗಳೆದು, ದೂರುದಾರರು ದುರುದ್ದೇಶಪೂರ್ವಕವಾಗಿ ದೂರು ದಾಖಲಿಸಿರುತ್ತಾರೆಂದು, ದೂರುದಾರರಿಗೆ ಸಂಬಂಧಿಸಿದ ಕಡತವನ್ನು ಎದುರುದಾರರು ತಾಲ್ಲೂಕು ಕಛೇರಿಗೆ ಕಳುಹಿಸಿದ ನಂತರ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವ ಅಂಶವು ನ್ಯಾಯಸಮ್ಮತವಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಪರಿವೀಕ್ಷಣಾ ಟಿಪ್ಪಣಿಯಲ್ಲಿ ಆರೋಪಿಸಿರುವಂತೆ ತಾನು ಯಾವುದೇ ದುರ್ನಡತೆಯನ್ನು ಎಸಗಿರುವುದಿಲ್ಲವೆಂದು ಹಾಗೂ ತನ್ನ ವಿರುದ್ಧ ಮಂಗಳೂರಿನ 3ನೇ ಹೆಚ್ಚುವರಿ ಜಿಲ್ಲಾ ಸತ್ರ ಹಾಗೂ ವಿಶೇಷ ನ್ಯಾಯಾಲಯದಲ್ಲಿ Spl.Case No: 151/2018 ರಂತೆ ಮೊಕದ್ದಮೆ ಇನ್ನೂ ವಿಚಾರಣೆಗೆ ಬಾಕಿ ಇರುತ್ತದೆ ಹಾಗೂ ಎದುರುದಾರರ ವಿರುದ್ಧ ಶಿಸ್ತು ಪ್ರಾಧಿಕಾರವಾದ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರು ಕ್ರಮಾಂಕ ಇಎಸ್‌ಟಿ(1) ಸಿಆರ್/133/2017/22831/ಎ1 ದಿನಾಂಕ: 26-02-2021 ರಂತೆ ಇಲಾಖಾ ವಿಚಾರಣೆಯನ್ನು ನಡೆಸಲು ಕ್ರಮ ಜರುಗಿಸಿರುತ್ತಾರೆಂದು ತಿಳಿಸಿರುತ್ತಾರೆ. ಹಾಗಾಗಿ ತನ್ನ ವಿರುದ್ಧ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಕೆಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ. ಹಾಗೂ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರು ಇಲಾಖಾ ವಿಚಾರಣೆ ಪ್ರಾರಂಭ ಮಾಡಿರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಹಾಗಾಗಿ ಎದುರುದಾರರನ್ನು ವಿಚಾರಣೆ ಮಾಡದೇಇರಲು ಸೂಕ್ತ ಕಾರಣಗಳು ಕಂಡು ಬಂದಿರುವುದಿಲ್ಲ, ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು ಮೇಲ್ನೋಟಕ್ಕೆ ಕಂಡುಬರುತ್ತದೆ.

3. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳನ್ನು ಪರಿಶೀಲಿಸಿದಾಗ, ಎದುರುದಾರರ ವಿರುದ್ದ ನಡವಳಿಯನ್ನು ಕೈಬಿಡಲು ಸೂಕ್ತ ಸಮಂಜಸ / ಸಮಾಧಾನಕರ ಕಾರಣ ಇಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

4. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

5. ಆದುದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯವಳಿ 1966ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡೆತೆ) 2021), ನಿಯಮ 3(1) (i) ರಿಂದ (iii)ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

18-1-22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು